ರವಿ ಎಂ. ಪೈ, ಹೊನ್ನಾವರ
ಕುಡಿದಾಗ ಸ್ವರ್ಗಕ್ಕೊಂದು ಗೇಣು ಎನ್ನುತ್ತಾರೆ. ಏಕೆ?



ಜಠರಕ್ಕೂ, ಹೃದಯಕ್ಕೂ ಒಂದೇ ಗೇಣು ದೂರ. ಅದು ಕೆಟ್ಟರೆ ಇವನು ಸ್ವರ್ಗಸ್ಥನಾಗುವನಲ್ಲ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ರಾಜಕೀಯ ನಾಯಕರ ಹಣೆಬರಹವನ್ನು ಬ್ರಹ್ಮ ಯಾವ ಸಮಯದಲ್ಲಿ ಬರೆದಿದ್ದ?
ವರ್ಕ್ ಪ್ರೆಷರ್ ಜಾಸ್ತಿ ಆಗಿ 'to hell with the world' ಎನ್ನುವ ಮೂಡ್‌ನಲ್ಲಿದ್ದಾಗ.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಸಂಸಾರಕ್ಕೆ ಕನ್ನಡ ಮಾತ್ರ ಸಾಕು. ಜೀವನ ನಡೆಸಲು ಈ ಕಾಲದಲ್ಲಿ ಇಂಗ್ಲಿಷ್ ಬೇಕೇಬೇಕು. ಏನಂತೀರಿ?
ಅಮ್ಮನ ಜೊತೆ ಆಂಟಿ ಇದ್ದರೆ ಒಳ್ಳೆಯದೇ. ಆದರೆ ಸವತಿಯಾಗಬಾರದು.

ಟಿ.ಎಂ. ಮಾನಪ್ಪ, ಶಿವಮೊಗ್ಗ
ಶಿಲಾ ಬಾಲಕಿಗೂ, ಶಾಲಾ ಬಾಲಕಿಗೂ ವ್ಯತ್ಯಾಸವೇನು?



ಶಿಲಾ ಬಾಲಕಿ ಅಂದಿನ ಸಮಾಜದ ಕನ್ನಡಿ; ಶಾಲಾ ಬಾಲಕಿ ಮುಂದಿನ ಸಮಾಜದ ಮುನ್ನುಡಿ.

ಶ್ರೀನಿವಾಸ ಜಿ. ಪದಕಿ, ಮುಂಬಯಿ
ಸಹನೆ ಮತ್ತು ಹೇಡಿತನಗಳ ಮುಖ್ಯ ಅಂತರ ಏನು ಸಾರ್?
ಸಹನೆ ನೋಟವನ್ನು ಕಲಿಸುತ್ತದೆ; ಹೇಡಿತನ ಓಟವನ್ನು ಕಲಿಸುತ್ತದೆ.

ಎ.ಕೆ. ಪಟ್ಟಾಭಿ, ಬೆಂಗಳೂರು
ಅಂದು 'ಹೆಣ್ಣಿನ ಬಾಳು ಕಣ್ಣೀರು'. ನಾಗರೀಕತೆಯ ಉತ್ತುಂಗ ತಲುಪಿರುವ ಇಂದು?
ಹೊರಗೂ, ಒಳಗೂ ದುಡಿಯಲೇಬೇಕಾದ ಸಂಕಷ್ಟದ ನಾನ್‌ಸ್ಟಾಪ್ ಸೀರಿಯಲ್.

ಎಚ್.ಆರ್. ಪ್ರಕಾಶ್, ಹೊಸನಗರ
ನನ್ನ ಪವಿತ್ರವಾದ ಮತವನ್ನು ಅಪವಿತ್ರ ರಾಜಕಾರಣಿಗೆ ಹಾಕಲು ಮನಸ್ಸಿಲ್ಲ. ಏನು ಮಾಡಲಿ?
ಪಿಕ್‌ನಿಕ್‌ಗೆ ಹೋಗಿ. ಹೊಣೆಗೇಡಿ ವಿದ್ಯಾವಂತ ಮತದಾರರು ಮಾಡುವುದೇ ಹಾಗೆ.

ಆರತಿ ಘಟಿಕಾರ್, ಬೆಂಗಳೂರು
ಒಂದು ದಿನದ ಮಟ್ಟಿಗೆ ಎಲ್ಲಾ ಸುದ್ದಿವಾಹಿನಿಗಳು ಮುಷ್ಕರ ಹೂಡಿ ತಮ್ಮ ಪ್ರಚಾರ ನಿಲ್ಲಿಸಿದರೆ ಏನಾಗುತ್ತದೆ?
ಯಾವ ಧರ್ಮಗುರುವೂ ನೀಡಲಾಗದ ವಿಶ್ವಶಾಂತಿ ಆ ದಿನ ನೆಲೆಸುತ್ತದೆ.

ಎಂ.ಎಸ್. ಧರ್ಮೇಂದ್ರ, ದೊಡ್ಡಮಗ್ಗೆ
ಬೆಂಗಳೂರಿನ ಬಹುತೇಕ ಬಾರ್‌ಗಳಲ್ಲಿ ಸನ್ನದುದಾರರ ಜಾಗದಲ್ಲಿ ಮಹಿಳೆಯರ ಹೆಸರಿರಲು ಕಾರಣವೇನು?
ಜಗದ ಮೊದಲ ಡ್ರಿಂಕ್ಸ್ (ಅಮೃತ) ನೀಡಿದ್ದೂ ಹೆಣ್ಣೇ ಎಂದು ನೆನೆಸಿಕೊಳ್ಳಲು.

ಭಾರತಿ ಮಾನಗೆ, ಹೊನ್ನಾವರ
ಭವ್ಯ ಭಾರತದ ಭವಿಷ್ಯ ನಿರ್ಧರಿಸುವವರು ಯಾರು?
ವರ್ತಮಾನದ ಭೂತಗಳು.

ರಾಜೀವ್ ಎನ್. ಮಾಗಲ್, ಸಕಲೇಶಪುರ
ಸಿಎಂ ಆಗಿದ್ದವರು ಕೇವಲ ಮಂತ್ರಿಗಿರಿಗೆ ಸಂತುಷ್ಟರಾಗುವುದು ತ್ಯಾಗವೋ, ಶರಣಾಗತಿಯ ಸಂಕೇತವೋ?
ಸಾಕಿದ ನಾಯಿ ಮನೆಯಿಂದ ಹೊರದಬ್ಬಿದಾಗ ಬೀದಿನಾಯಿ ಆಗುವುದು ಕೇವಲ ಅನಿವಾರ್ಯ.

ಅಮರಯ್ಯಾ ಪತ್ರಿಮಠ, ಸುರಪುರ
ಈ 'ವಾಸ್ತು ಪ್ರಕಾರ' ಅಂದ್ರೆ ಏನು ಸ್ವಾಮಿ?
ವಸ್ತುವಿಗಿಂತ ಮೌಢ್ಯಕ್ಕೆ ಮಣೆ ಹಾಕುವ ಒಂದು ಶುದ್ಧ ಅನರ್ಥ.

ಬಿ. ಚಂದ್ರೇಗೌಡ, ಬೆಂಗಳೂರು
ಸತ್ತ ನಂತರವೂ ಬದುಕುವುದು ಹೇಗೆ?
ದೇಹದಾನ ಮಾಡಿ ಯಾವ್ಯಾವ ದೇಹದಲ್ಲೋ ಪಾರ್ಟ್ ಬೈ ಪಾರ್ಟ್ ಬದುಕಿ.

## ಬಹುಮಾನಿತ ಪ್ರಶ್ನೆ

ಸಿ.ಎನ್. ವಿಜಯಲಕ್ಷ್ಮಿ, ಶಿವಮೊಗ್ಗ
ಹೆಣ್ಣು ದೇವರುಗಳನ್ನು ಪೂಜಿಸುವ ಈ ದೇಶದಲ್ಲಿ ಹೆಣ್ಣಿನ ಶೋಷಣೆ, ಅತ್ಯಾಚಾರಗಳು ನಡೆಯುವುದೇಕೆ?
ಮಂಗಳಾರತಿ ಮುಗಿಯುಷ್ಟರಲ್ಲಿ ಮನ 'ಮಂಗ'ವಾಗಿ, ಚಿತ್ತದಲ್ಲಿ ಕೇವಲ 'ರತಿ' ಉಳಿಯುವುದರಿಂದ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
ನಾವು ಕೇಳದೆಯೇ ಸಿಗುವ ವರ ಯಾವುದು?
ಹುಟ್ಟಿನಿಂದಲೇ ನಮ್ಮದಾಗುವ ಪ್ರವರ.

ಬಿ. ಬೋರೇಗೌಡ, ಸರಸ್ವತಿಪುರ
ಧರ್ಮಸ್ಥಳದ ಮಂಜುನಾಥನಿಗೂ, ತಿರುಪತಿಯ ತಿಮ್ಮಪ್ಪನಿಗೂ ವ್ಯತ್ಯಾಸವೇನಿದೆ ಗುರುದೇವಾ?
ಭಕ್ತರ ಕಪ್ಪುಹಣದ ಕಾಣಿಕೆ ಪಡೆದೂ ಪಡೆದೂ ತಿಮ್ಮಪ್ಪ ಕಪ್ಪಾದ. ಮಂಜುನಾಥ ಇನ್ನೂ ಅಷ್ಟು ಕಪ್ಪಾಗಿಲ್ಲ.

ವಿ. ಹೇಮಂತಕುಮಾರ್, ಬೆಂಗಳೂರು
ಚಂದಮಾಮನ ಕಥೆಗೆ ನಾಯಕನಾಗಿ ಬಾ ಅಂತಿದಾಳಲ್ಲಾ ರಾಮ್‌ಜಿ...?



ಗುಡ್ ರೋಲ್. ಆಕೆ ಚಂದ. ನೀವು ಮಾಮ. ಮಾಮನೇ ನಿಂತು ಪ್ರೇಮಿಗಳನ್ನು ಒಂದಾಗಿಸುವ ಚಿತ್ರವದು.

ಕಾಳೀಹುಂಡಿ ಶಿವಕುಮಾರ್, ಮೈಸೂರು
ವರದಕ್ಷಿಣೆ ಮತ್ತು ವಧುದಕ್ಷಿಣೆ ಸಂಪೂರ್ಣವಾಗಿ ನಿಲ್ಲಬೇಕಾದರೆ ಏನು ಮಾಡಬೇಕು?
'ಏಂಜಲ್ ಬೇಕು, ಎಂಜಲು ಬೇಡ' ಎಂದು ವಧುವರರು ಖಡಕ್ಕಾಗಿ ತೀರ್ಮಾನಿಸಬೇಕು.

ಪಿ. ಜಯವಂತ ಪೈ, ಕುಂದಾಪುರ
ಸಮಾರಂಭಗಳಲ್ಲಿ ದೀಪ ಬೆಳಗುವಾಗ ಬಲಗೈಗೆ ಎಡಗೈ ತಾಗಿಸುವುದೇಕೆ?
ಎಡವಟ್ಟಾಗದಂತೆ ಬಲವಾಗಿ ಉರಿ ಎಂದು ದೀಪವನ್ನು ಪ್ರಾರ್ಥಿಸುವ ಸಂಕೇತವದು.

■ ರಾಮ್